ಅನುಬಂಧ - 2

ಕ್ರ.ಸಂ. ಜಿಲ್ಲೆಯ ಹೆಸರು ಸಂ.	ಮಂಜೂರು ಮಾಡಿದ ಮೊತ್ತ ರೂ. ಗಳಲ್ಲಿ	ಸಂಸ್ಥೆಗಳ ಸಂಖ್ಯೆ
1. ಕೋಲಾರ	19,50,000.00	57
2. ಮೈಸೂರು	17,75,000.00	52
3. ಚಿತ್ರದುರ್ಗ	15,35,000.00	88
4. ದಾವಣಗೆರೆ	4,30,000.00	12
5. ಗದಗ	14,40,000.00	52
6. ಬೀದರ್	11,30,000.00	48
7. ಚಿಕ್ಕಮಗಳೂರು	9,05,000.00	35
8. ಮಂಡ್ಯ	5,80,000.00	32
9. ಉತ್ತರ ಕನ್ನಡ ಜಿಲ್ಲೆ	10,80,000.00	51
10. ದಕ್ಷಿಣ ಕನ್ನಡ	8,45,000.00	41
11. ಬಿಜಾಪುರ	10,10,000.00	38
12. ಧಾರವಾಡ	10,45,000.00	52
13. ಹಾಸನ	11,55,000.00	46
14. ಹಾವೇರಿ	12,20,000.00	51
15. ಬಾಗಲಕೋಟೆ	2,05,000.00	09
16. ಬೆಂಗಳೂರು ಗ್ರಾಮಾಂತರ	6,95,000.00	26
ಒಟ್ಟು ಮೊತ್ತ	**1,70,00,000.00**	**690**

ಕಳ್ಳಂಬೆಳ ಕ್ಷೇತ್ರಕ್ಕೆ ಹೆಚ್ಚುವರಿ ಮನೆ ಮಂಜೂರು

1758 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ತುಮಕೂರು ಜಿಲ್ಲೆ ಕಳ್ಳಂಬೆಳ ಕ್ಷೇತ್ರದ ಮೂರು ತಾಲ್ಲೂಕುಗಳನ್ನೊಳಗೊಂಡಂತೆ 1994-95 ರಿಂದ 1998-99ರವರೆಗೆ ಆಶ್ರಯ, ಅಂಬೇಡ್ಕರ್, ಇಂದಿರಾ ಆವಾಜ್ ಮತ್ತು ಜೆಆರ್‌ವೈ ಯೋಜನೆಯಡಿ ನಿರ್ಮಿಸಿದ ಮನೆಗಳ ಸಂಖ್ಯೆ ಎಷ್ಟು ? ಆ ಬಗ್ಗೆ ಖರ್ಚು ಮಾಡಿದ ಹಣವೆಷ್ಟು ?

ಆ) *ಈ ಕ್ಷೇತ್ರದಲ್ಲಿ ಗುರಿ ಸರ್ಕಾರದ ಸಾಕಾಗದ ಕಾರಣ ವಿಶೇಷವಾಗಿ ಹೆಚ್ಚುವರಿ ಮನೆಗಳನ್ನು 1998-99 ಅಥವಾ ಈ ವರ್ಷಕ್ಕೆ ಕನಿಷ್ಟವಾಗಿ ಒಂದು ಸಾವಿರ ಮನೆ ನೀಡಲಾಗುವುದೇ ?*

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) :

ಆ) ಮನೆಗಳ ಸಂಖ್ಯೆ ಹಾಗೂ ಖರ್ಚು ಮಾಡಲಾದ ವಿವರಗಳು ಈ ಕೆಳಗಿನಂತಿರುತ್ತದೆ.

(ರೂ. ಲಕ್ಷಗಳಲ್ಲಿ)

ಕ್ರ.	ಯೋಜನೆ	1994-95		1995-96		1996-97		1997-98		1998-99	
		ನಿರ್ಮಿಸಿದ ಮನೆಗಳ ಸಂಖ್ಯೆ	ಖರ್ಚಾದ ಹಣ	ನಿರ್ಮಿಸಿದ ಮನೆಗಳ ಸಂಖ್ಯೆ	ಖರ್ಚಾದ ಹಣ	ನಿರ್ಮಿಸಿದ ಮನೆಗಳ ಸಂಖ್ಯೆ	ಖರ್ಚಾದ ಹಣ	ನಿರ್ಮಿಸಿದ ಮನೆಗಳ ಸಂಖ್ಯೆ	ಖರ್ಚಾದ ಹಣ	ನಿರ್ಮಿಸಿದ ಮನೆಗಳ ಸಂಖ್ಯೆ	ಖರ್ಚಾದ ಹಣ
1	2	3	4	5	6	7	8	9	10	11	12
1.	ಆಶ್ರಯ	172	25.80	310	61.50	161	28.95	104	20.80	838	155.75
2.	ಅಂಬೇಡ್ಕರ್	57	8.55	137	27.40	108	21.60	79.15	15.80	438	84.75
3.	ಇಂದಿರಾ ಆವಾಜ್	86	12.04	392	58.18	345	69.00	198	39.60	1190	203.70
4.	ಜೆ.ಆರ್.ವೈ	14	1.92	14	1.96	16	2.24	19	3.74	91	13.96

ಆ) ಈ ಕ್ಷೇತ್ರಕ್ಕೆ 1998-99ನೇ ಸಾಲಿಗೆ ಹೆಚ್ಚುವರಿಯಾಗಿ ಸರ್ಕಾರದಿಂದ 1000 ಮನೆಗಳನ್ನು ಈಗಾಗಲೇ ನೀಡಲಾಗಿದೆ.

ಕಳ್ಳಂಬೆಳ್ಳದ ಬಸ್ ನಿಲ್ದಾಣ

1759 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) *ಕಳ್ಳಂಬೆಳ್ಳ ಬಸ್ ನಿಲ್ದಾಣಕ್ಕಾಗಿ ಜಮೀನು ಮಂಜೂರಾಗಿರುವುದು ನಿಜವೇ ?*

ಆ) *ಹಾಗಿದ್ದಲ್ಲಿ ಇದುವರೆವಿಗೂ ಕಾಮಗಾರಿಯನ್ನು ಪ್ರಾರಂಭಿಸದಿರುವುದಕ್ಕೆ ಕಾರಣಗಳೇನು ?*

ಶ್ರೀ ಬಿ.ಎನ್. ಬಚ್ಚೇಗೌಡ (ಸಾರಿಗೆ ಸಚಿವರು) :

ಅ) ಹೌದು.

ಆ) ಕಳ್ಳಂಬೆಳ್ಳದಲ್ಲಿ ಬಸ್ ನಿಲ್ದಾಣ ನಿರ್ಮಿಸಲು ಸರ್ವೆ ಸಂಖ್ಯೆ 141ರಲ್ಲಿ 1 ಎಕರೆ 29 ಗುಂಟೆ ನಿವೇಶನವನ್ನು ದಿನಾಂಕ 12.1.99ರಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು